ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡು ಎಂದು ಮಾಡಿ, ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು ೩೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತಿಳಿಸಲಾಗಿತ್ತು. ತಾವು ಕೂಡ ಇದೇ ಸಭೆಯಲ್ಲಿ ಹೇಳಿದ್ದೀರಿ. ಇವತ್ತು ನೀವು ೧೦೦ ಕೋಟಿ ರೂಪಾಯಿಗಳನ್ನು ರಾಯಚೂರು, ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳಿಗೆ ಕೊಟ್ಟರೆ ಹೊಸದಾಗಿ ಯಾವ ಕೆಲಸಗಳನ್ನೂ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಎದುರುಗಡೆ ಹೇಳಿದ್ದೇವೆ. ಚಿಕ್ಕಮಗಳೂರಂ, ಹಾಸನ ಜಿಲ್ಲೆಗಳು ಈಗಾಗಲೇ ಅಭಿವೃದ್ಧಿ ಹೊಂದಿವೆ. ರಾಜ್ಯ ಸರ್ಕಾರದ ಆದ್ಯತೆ ಮೇರೆಗೆ ನಮ್ಮ ಭಾಗಕ್ಕೆ ಹಣ ಕೊಡಬೇಕು. ಇದರ ಬಗ್ಗೆ ತಾವು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಜಿಲ್ಲಾ ಪರಿಷತ್ ಉದಾಹರಣೆ ಕೊಟ್ಟಿದ್ದೇನೆ. ನೀರಾವರಿಗೂ, ರಸ್ತೆಗಳ ಕಾರ್ಯಕ್ಕೂ ಹೆಚ್ಚು ದುಡ್ಡು ಕೊಟ್ಟಿದ್ದೇವೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಕೇಂದ್ರ ಸರ್ಕಾರಕ್ಕೂ ಯೋಜನಾ ಆಯೋಗಕ್ಕೂ ಪತ್ರವನ್ನು ಬರೆದು ಹಿಂದುಳಿದ ಪ್ರದೇಶಗಳು ಅಭಿವೃದ್ಧಿಯಾಗಬೇಕಾದರೆ ಅವರು ವಿಶೇಷ ಗಮನ ಕೊಡಬೇಕು ಎಂದು ತಿಳಿಸಿದ್ದೇವೆ. ಆಂಧ್ರದಲ್ಲಿ ತೆಲಾಂಗಣ ಅಭಿವೃದ್ಧಿಗೆ ಗಮನ ಕೊಟ್ಟಂತೆ, ಬಂಗಾಳದಲ್ಲಿ ಸುಂದರ್‌ಬಂದ್‌ಗೆ ಗಮನ ಕೊಟ್ಟಂತೆ, ಯೋಜನೆ ಕೈಗೊಳ್ಳಬೇಕೆಂದು ತಿಳಿಸಿದ್ದೇವೆ. ಈ ಯೋಜನೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಅರ್ಧರ್ಧ ಹಣ ಕೊಡಬೇಕು.

ಶ್ರೀ ಧರ್ಮಸಿಂಗ್.—ಗುಲ್ಬರ್ಗ, ಬೀದರ್, ಬಳ್ಳಾರಿ ರಾಯಚೂರು ಭಾಗದ ಶಾಸಕರುಗಳನ್ನು ಕರೆದು ಇದರ ಬಗ್ಗೆ ಮಾತನಾಡೋತ್ತೇವೆಂದೂ ಹಿಂದೆ ತಿಳಿಸಿದ್ದಿರಿ. ಇದುವರೆವಿಗೂ ಸಭೆ ಕರೆದಿಲ್ಲ. ಕೇಂದ್ರ ಸರ್ಕಾರಕ್ಕೂ ಮನವಿ ಮಾಡಿ. ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ಆದ್ಯತೆ ಕೊಟ್ಟಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಅಧಿವೇಶನದಲ್ಲಿಯೇ ಸಭೆ ಕರೆಯುತ್ತೇನೆ.

ಮೂರನೆಯ ಹಿಂದುಳಿದ ವರ್ಗಗಳ ಆಯೋಗ

*೨೯೯ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ),—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಿಂದುಳಿದ ವರ್ಗದವರ ಬಗ್ಗೆ ಮೂರನೇ ಆಯೋಗವನ್ನು ರಚಿಸುವ ಆಲೋಚನೆಯು ಸರ್ಕಾರದವರಲ್ಲಿದೆಯೇ ;

ಆ) ಹಾಗಿದ್ದಲ್ಲಿ, ಇದುವರೆವಿಗೂ ಆಯೋಗವನ್ನು ರಚಿಸದಿರಲು ಕಾರಣಗಳೇನು ಮತ್ತು ಯಾವಾಗ ರಚಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು.

ಆ) ಹಿಂದುಳಿದ ವರ್ಗಗಳ ಹೊಸ ಆಯೋಗವನ್ನು ರಚಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಈ ಬಗ್ಗೆ ಶೀಘ್ರವಾಗಿ ಆದೇಶ ಹೊರಡಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ವೆಂಕಟಸ್ವಾಮಿ ಆಯೋಗದ ವರದಿಯನ್ನು ಈ ಸರ್ಕಾರ ಕೈಬಿಟ್ಟ ಮೇಲೆ ಅತಿಶೀಘ್ರವಾಗಿ ಹಿಂದುಳಿದ ವರ್ಗಗಳ ಹೊಸ ಆಯೋಗವನ್ನು ನೇಮಕ ಮಾಡುತ್ತೇವೆಂದು ಹೇಳಿದ್ದರು. ಈಗ ಸುಮಾರು ಮೂರು ವರ್ಷ ಕಳೆದರೂ ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಈ ಕೆಲಸ ಇಷ್ಟು ವಿಳಂಬವಾಗಲಿಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ ಅದರ ಬಗ್ಗೆ ವಿವರ ಇಲ್ಲ. ಇನ್ನು ಎಷ್ಟು ದಿವಸದಲ್ಲಿ ಈ ಆಯೋಗವನ್ನು ನೇಮಕ ಮಾಡುತ್ತೀರಿ ಎಂದು ಸ್ಪೆಸಿಫಿಕ್ ಟೈಂ ಕೇಳಿದರೆ ಉತ್ತರ ಹೇಳಿಲ್ಲ ಈಗ ಈ ಸರ್ಕಾರ ಈ ನೇಮಕದ ಬಗ್ಗೆ ಮಾಡುತ್ತಿರುವ ವಿಳಂಬವನ್ನು ನೋಡಿದರೆ ಇನ್ನು ಎರಡು ವರ್ಷಗಳಾದರೂ ಇದು ಆಗುವುದಿಲ್ಲ ಎಂದು ಕಾಣುತ್ತದೆ. ಆದರೆ ಜನೋತ್ಸವ ಮಾತ್ರ ಎಂಟು ದಿವಸಗಳಲ್ಲಿಯೇ ನಡೆದುಹೋಯಿತು. ಹಿಂದುಳಿದ ವರ್ಗಗಳ ಆಯೋಗ ಈ ರಾಜ್ಯದಲ್ಲಿ

ಅವಶ್ಯಕವಾಗಿ ಆಗಬೇಕಾಗಿದೆ. ಆದರೆ ಈ ಸರ್ಕಾರದ ವಿಳಂಬ ನೀತಿಯನ್ನು ನೋಡಿದರೆ ಈ ವರ್ಗದ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇಲ್ಲ ಎಂದು ಕಾಣುತ್ತದೆ.

ಶ್ರೀ ಜಿ. ಬಸವಣ್ಣಪ್ಪ.—ವೆಂಕಟಸ್ವಾಮಿ ಆಯೋಗದ ವರದಿಯನ್ನು ಸಲ್ಲಿಸಿದ್ದು ತಮಗೆಲ್ಲಾ ಗೊತ್ತಿದೆ. ೩೧-೩-೧೯೮೬ರಲ್ಲಿ ಆಯೋಗದ ವರದಿಯ ಬಗ್ಗೆ ಸಾಕಷ್ಟು ವಿರೋಧ ಬಂದಿದ್ದರಿಂದ ಸರ್ಕಾರ ಮೂರು ವರ್ಷಗಳ ಕಾಲ ತಾತ್ಕಾಲಿಕ ಮಿಸಲಾತಿ ಆಜ್ಞೆಯನ್ನು ೧೫-೧೦-೧೯೮೬ರಲ್ಲಿ ಕೊಟ್ಟಿದೆ ನಾವು ವಚನಕ್ಕೆ ಬದ್ಧರಾಗಿದ್ದೇವೆ. ಮೂರನೆಯ ಆಯೋಗವನ್ನು ನಾವು ಸಧ್ಯದಲ್ಲಿಯೇ ರಚನೆ ಮಾಡುತ್ತೇವೆ.

ಶ್ರೀ ಬಿ. ಲಕ್ಕಪ್ಪ.—ಈಗಾಗಲೇ ಮೂರು ವರ್ಷ ಕಳೆದಿದೆ, ಇನ್ನು ಎರಡು ವರ್ಷಗಳು ಕಳೆಯಬೇಕು ಎಂದು ಹೇಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ —ವೆಂಕಟಸ್ವಾಮಿ ಆಯೋಗದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದ್ದುದು ೩೧-೩-೧೯೮೬ರಲ್ಲಿ. ತಾತ್ಕಾಲಿಕ ಮಿಸಲಾತಿ ಆಜ್ಞೆಯನ್ನು ೧೫-೧೦-೧೯೮೬ರಲ್ಲಿ ಕೊಟ್ಟಿದ ಮೂರು ವರ್ಷ ಹೇಗೆ ಆಗುತ್ತದೆ ? ಇನ್ನೂ ಒಂದು ವರ್ಷ ಕೂಡ ಆಗಿಲ್ಲ. ಆದಷ್ಟು ಬೇಗ ಅದರ ರಚನೆ ಮಾಡುತ್ತೇವೆ.

ಯಾತ್ರಿಕರ ಮೇಲೆ ಹೆಚ್ಚಿಸಲಾದ ತೆರಿಗೆ

೭೧೬. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಗತ್ ಪ್ರಸಿದ್ಧವಾದ ಗೊಮ್ಮಟೇಶ್ವರನನ್ನು ನೋಡಲು ಯಾತ್ರಿಕರು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಯಾತ್ರಿಕರು ಬೆಟ್ಟವನ್ನು ಹತ್ತಲು ರೂ. ೨-೦೦ ಯನ್ನು ಒಬ್ಬರಿಗೆ ತೆರಿಗೆ ವಿಧಿಸಿ ಯಾತ್ರಿಕರು ಬರುವುದನ್ನು ತಡೆಗಟ್ಟುವುದು ಸರ್ಕಾರದವರ ನೀತಿಯೇ ?

ಇ) ಇಂತಹ ಏರಿಕೆಯಿಂದ ಆಡಳಿತ ಮಂಡಳಿಗೆ ಹಾಗೂ ಸರಕಾರಕ್ಕೆ ಬಂದ ಲಾಭವೆಷ್ಟು ಹಾಗೂ ಯಾವ ದಿನಾಂಕದಂದ ಏರಿಕೆಯನ್ನು ಮಾಡಲಾಯಿತು ?

ಈ) ಮುಜರಾಯಿ ಆಯುಕ್ತರ ಶಿಫಾರಸ್ಸು ಇಲ್ಲದೇ ಸರಕಾರವೇ ಏಕಾಏಕಿ ಏರಿಕೆ ಮಾಡಿದೆಯೇ ?

ಶ್ರೀ ಕೆ. ಅಮರನಾಥ್‌ಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಯಾತ್ರಿಕರಿಂದ ರೂ. ೨-೦೦ಗಳನ್ನು ಕ್ಷೇತ್ರದ ಅಭಿವೃದ್ಧಿಗಾಗಿ ಪಡೆಯಲಾಗುತ್ತಿದೆ ವಿನಹ ಯಾತ್ರಿಕರನ್ನು ತಡೆಗಟ್ಟುವುದು ಸರ್ಕಾರದ ನೀತಿಯಲ್ಲ.

ಇ) ಸರ್ಕಾರದ ಆದೇಶ ಸಂಖ್ಯೆ ಆರ್‌ಡಿಪಿ೨೦೯ ಎಂಇಟಿ ೮೫ ದಿನಾಂಕ ೯-೪-೮೭ರ ಪ್ರಕಾರ ದಿನಾಂಕ ೧-೧೦-೮೭ ರಿಂದ ರೂ. ೧-೦೦ ರಿಂದ ೨-೦೦ಗಳಿಗೆ ಹೆಚ್ಚಿಸಲಾಯಿತು. ಈ ಏರಿಕೆಯಿಂದಾಗಿ ಎಸ್‌ಡಿಜಿ ಎಂಬ ಮಂಡಳಿಗೆ ರೂ. ೨,೮೬,೮೭೦ ಆದಾಯ ಬಂದಿದ್ದು ಸದರಿ ಹಣವನ್ನು ಕ್ಷೇತ್ರದ ಅಭಿವೃದ್ಧಿಗಾಗಿ ವಿನಿಯೋಗ ಮಾಡಲಾಗುತ್ತಿದೆ. ಸರ್ಕಾರಕ್ಕೆ ಇದರಿಂದ ಲಾಭ ಇಲ್ಲ.

ಈ) ಮುಜರಾಯಿ ಆಯುಕ್ತರ ಶಿಫಾರಸ್ಸಿನ ಮೇರೆಗೆ ಸರ್ಕಾರವು ರೂ. ೧-೦೦ ರಿಂದ ೨-೦೦ಕ್ಕೆ ಕ್ಷೇತ್ರಾಭಿವೃದ್ಧಿ ನಿಧಿಯೆಂದು ಹೆಚ್ಚಿಸಿ ಆದೇಶ ಹೊರಡಿಸಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಈ ಶುಲ್ಕ ಏರಿಕೆಯ ಮುನ್ನ ಒಂದು ವರ್ಷಕ್ಕೆ ಎಷ್ಟು ಜನ ಯಾತ್ರಿಕರು ಬರುತ್ತಿದ್ದರು ? ಈ ಶುಲ್ಕ ಏರಿಕೆಯಾದಮೇಲೆ ಎಷ್ಟು ಜನ ಯಾತ್ರಿಕರು ಬರುತ್ತಿದ್ದಾರೆ? ಮತ್ತೊಂದು ವಿಚಾರ ಹೇಳಿದರೆ ಈ ಮುಜರಾಯಿ ಸಂಸ್ಥೆಗೆ ಹೊರ ರಾಜ್ಯದಿಂದ ಸರ್ಕಾರ ನಾಮಕರಣ